(18)

**ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿ ಇವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ**

**ಸೂಚನೆ:-**

ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ, ವಾರ್ಡ್ ನಂ.81 ರ ಸರ್ವೆ ನಂ.199 ದಾಖಲೆಯಂತೆ ಸರ್ಕಾರಿ ಜಮೀನಾಗಿದ್ದು, ಇದರಲ್ಲಿ ಸುಮಾರು 03-04 ತಿಂಗಳುಗಳಿಂದ ಸ್ಥಳೀಯ ಮಾಜಿ ಕಾರ್ಪೋರೇಟರ್ ಹಾಗೂ ಅವರ ಬೆಂಬಲಿಗರು ಸೇರಿಕೊಂಡು ಈ ಸರ್ಕಾರಿ ಜಮೀನಿನಲ್ಲಿ ಅನಧಿಕೃತ ಮನೆಗಳನ್ನು ನಿರ್ಮಾಣ ಮಾಡಿ ಸುಮಾರು 15 ರಿಂದ 20 ಲಕ್ಷ ರೂಗಳ ಮೌಲ್ಯಕ್ಕೆ ಕಾನೂನು ಬಾಹಿರವಾಗಿ ಸುಮಾರು 10 ರಿಂದ 15 ಮನೆಗಳನ್ನು ಅನಧಿಕೃತವಾಗಿ ಯಾವುದೇ ಹಂಗಿಲ್ಲದೇ, ರಾಜರೋಷವಾಗಿ ನಿರ್ಮಾಣ/ಮಾರಾಟ ಮಾಡಿರುತ್ತಾರೆ. ಬೆಂಗಳೂರು ಪೂರ್ವ ತಹಶೀಲ್ದಾರ್, ಬಿ.ಬಿ.ಎಂ.ಪಿ ಜಂಟಿ ಆಯುಕ್ತರು (ಮಹದೇವಪುರ) ರವರ ಗಮನಕ್ಕೆ ತಂದರೂ ಯಾವುದೇ ಕಾನೂನು ಕ್ರಮ ಕೈಗೊಳ್ಳದೇ ಇರುವುದರ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಹೇಳಿಕೆ:-**

ಬೆಂಗಳೂರು ಪೂರ್ವ ತಾಲ್ಲೂಕು, ಮಹದೇವಪುರ ಹೋಬಳಿ, ಮಹದೇವಪುರ ಗ್ರಾಮದ ಸ.ನಂ.199 ರ ಜಮೀನು ಮೂಲತಃ ಖರಾಬು ಬಂಡೆ ಜಮೀನಾಗಿದ್ದು, ಸದರಿ ಜಮೀನಿನಲ್ಲಿ ಅಕ್ರಮ ಒತ್ತುವರಿದಾರರಾದ 1) ಮಹೇಶ್ ಬಿನ್ ಈರಪ್ಪ, 2) ಪ್ರಸಾದ್ ಬಿನ್ ರಂಗಪ್ಪ, 3) ನಾಗಭೂಷಣ್ ಬಿನ್ ನರಸಿಂಹಪ್ಪ, 4) ಭಗವಾನ್ ಬಿನ್ ಚಿನ್ನಪ್ಪ, 5) ದೀಪಕ್ ಬಿನ್ ಕಮಲ್, 6) ಜಯಮ್ಮ ಕೋಂ ಮುನಿಯಪ್ಪ, 7) ಮಂಜುನಾಥ್ ಬಿನ್ ಶಂಕರಪ್ಪ, 8) ರಾಮಕೃಷ್ಣ ಬಿನ್ ಅಪ್ಪಣ್ಣ, 9) ಮಂಜುನಾಥ್ ಬಿನ್ ರಾಮಕೃಷ್ಣ, 10) ದಿವಾಕರ್ ಬಿನ್ ಪ್ರಕಾಶ್, 11) ಲೋಕೇಶ್ ಬಿನ್ ಕಾಳೇಗೌಡ, 12) ಪುಷ್ಪ ಕೋಂ ಗೋಪಾಲ್, 13) ಮಲರ್ ಕೋಂ ಸುರೇಶ್, ಹಾಗೂ 14) ಚಂದ್ರಬಾಬು ಬಿನ್ ಮುನಿರತ್ನ ರೆಡ್ಡಿ ಎಂಬುವವರು ಅನಧಿಕೃತ ಮನೆಗಳನ್ನು ನಿರ್ಮಿಸಿದ್ದು, ಸದರಿಯವರ ವಿರುದ್ಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಒತ್ತುವರಿ ಗಡಿ ಗುರ್ತಿಸಿ ನಕ್ಷೆ ತಯಾರಿಸಲು ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ತಿಳಿಸಲಾಗಿದೆ. ಸದರಿಯವರಿಂದ ವರದಿ ಮತ್ತು ನಕ್ಷೆಯು ಸ್ವೀಕೃತಗೊಂಡ ನಂತರ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಸದರಿ ಒತ್ತುವರಿದಾರರ ವಿರುದ್ಧ ಪ್ರಕರಣ ದಾಖಲಿಸಲು ಕ್ರಮ ಕೈಗೊಳ್ಳಲಾಗುವುದು.

(ಆರ್‌ಡಿ 17 ಎಲ್‌ಜಿಕ್ಯೂ 2021)

**(ಆರ್. ಅಶೋಕ)**
ಕಂದಾಯ ಸಚಿವರು